U.G.D.ಗೆ ಒಳಪಡಿಸುವುದು

341 (615) ಶ್ರೀ ಸಿದ್ದು ಸವದಿ (ತೇರದಾಳ) :– ಮಾನ್ಯ ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ರಾಜ್ಯದಲ್ಲಿ ಒಟ್ಟು ಎಷ್ಟು ನಗರಸಭೆ ಮತ್ತು ಪುರಸಭೆಗೆ ಯುಜಿಡಿ ಒದಗಿಸಲಾಗಿದೆ ; ಉಳಿದವುಗಳಿಗೆ ಈ ಯೋಜನೆಯನ್ನು ಯಾವಾಗ ಜಾರಿಗೊಳಿಸಲಾವುದು ;

ಆ) ತೇರದಾಳ, ರಬಕವಿ–ಬನಹಟ್ಟಿ ಮತ್ತು ಮಹಾಲಿಂಗಪೂರಗಳನ್ನು ಯುಜಿಡಿಗೆ ಒಳಪಡಿಸಲು ಮೂರು ಬಾರಿ ಮನವಿ ಮಾಡಿದ್ದು, ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ ಯಾವಾಗ ಈ ಯೋಜನೆ ಜಾರಿ ಮಾಡಲಾಗುವುದು;

ಇ) ಎಡಿಬಿ ಯೋಜನೆಯಲ್ಲಿ ಮಂಜೂರಾದ ಅನುದಾನವನ್ನು ಯುಜಿಡಿಗೆ ಬಳಸಬಹುದೇ ; ಹಾಗಿದ್ದಲ್ಲಿ ಉಳಿದ ಮೂಲಭೂತ ಸೌಲಭ್ಯಗಳಾದ, ರಸ್ತೆ, ಕುಡಿಯುವ ನೀರು, ವಿದ್ಯುತ್ ದೀಪ, ಡ್ರೈನೇಜ್‌ಗಳಂಥ ಮೂಲಭೂತ ಸೌಲಭ್ಯಗಳಿಗೆ ಯಾವ ರೀತಿ ಹಣಕಾಸಿನ ನೆರವು ನೀಡಲಾಗುವುದು ?

ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು):–

ಅ) ರಾಜ್ಯದಲ್ಲಿ ಒಟ್ಟು 44 ನಗರ ಸಭೆಗಳಿದ್ದು 19 ನಗರ ಸಭೆಗಳಲ್ಲಿ ಒಳಚರಂಡಿ ವ್ಯವಸ್ಥೆ ಕಲ್ಪಿಸಲಾಗಿದೆ. 3 ನಗರಸಭೆಗಳಲ್ಲಿ ಒಳಚರಂಡಿ ವ್ಯವಸ್ಥೆ ಕಲ್ಪಿಸಲು ಯೋಜನೆಗಳ ಅನುಮೋದನೆಯಾಗಿದ್ದು (ಒಂದು ನಗರಸಭೆಯಲ್ಲಿ ಯೋಜನೆ ಪ್ರಗತಿಯಲ್ಲಿದೆ) ಉಳಿದ 22 ನಗರ ಸಭೆಗಳಲ್ಲಿ ಒಳಚರಂಡಿ ಯೋಜನೆಗಳನ್ನು ರೂಪಿಸಿ ಹಣಕಾಸಿನ ಲಭ್ಯತೆಯ ಆಧಾರದ ಮೇಲೆ ಹಂತ ಹಂತವಾಗಿ ಕ್ರಮ ಕೈಗೊಳ್ಳಲಾಗುವುದು.

ರಾಜ್ಯದಲ್ಲಿ ಒಟ್ಟು 94 ಪುರಸಭೆಗಳಿದ್ದು 17 ಪುರಸಭೆಗಳಲ್ಲಿ ಒಳಚರಂಡಿ ವ್ಯವಸ್ಥೆ ಕಲ್ಪಿಸಲಾಗಿದೆ. 28 ಪುರಸಭೆಗಳಲ್ಲಿ ಒಳಚರಂಡಿ ವ್ಯವಸ್ಥೆ ಕಲ್ಪಿಸಲು ಯೋಜನೆಗಳ ಅನುಮೋದನೆಯಾಗಿದ್ದು (ಇಪ್ಪತ್ತು ಪುರಸಭೆಗಳಲ್ಲಿ ಯೋಜನೆ ಪ್ರಗತಿಯಲ್ಲಿದೆ) ಉಳಿದ 49 ಪುರಸಭೆಗಳಲ್ಲಿ ಒಳಚರಂಡಿ ಯೋಜನೆಗಳನ್ನು ರೂಪಿಸಿ ಹಣಕಾಸಿನ ಲಭ್ಯತೆಯ ಆಧಾರದ ಮೇಲೆ ಹಂತ ಹಂತವಾಗಿ ಕ್ರಮ ಕೈಗೊಳ್ಳಲಾಗುವುದು.

ಆ) ಬಂದಿದೆ.

1. ತೇರದಾಳ ಪಟ್ಟಣಕ್ಕೆ ಹಾಲಿ ಕೃಷ್ಣ ನದಿಯಿಂದ, ತಲಾ ದಿನಂಪ್ರತಿ ಕೇವಲ 70 ಲೀಟರ್ ನೀರು ಸರಬರಾಜು ಮಾಡುತ್ತಿರುವುದರಿಂದ ನೀರು ಸರಬರಾಜು ವ್ಯವಸ್ಥೆಯನ್ನು ಅಭಿವೃದ್ಧಿ ಮಾಡಿ ಸಿಪಿಹೆಚ್ಇಇಒ ನಿಯಮದಂತೆ ನೀರು ಸರಬರಾಜು ಪ್ರಮಾಣವನ್ನು ತಲಾ ದಿನಂಪ್ರತಿ 135 ಲೀಟರ್‌ಗೆ ಹೆಚ್ಚಿಸಿ, ನಂತರ ಒಳಚರಂಡಿ ಯೋಜನೆಯನ್ನು ಕಲ್ಪಿಸಲು ಅವಕಾಶವಿರುತ್ತದೆ. ಅದರಂತೆ ಮುಂದಿನ ಕ್ರಮ ಕೈಗೊಳ್ಳಲಾಗುತ್ತದೆ.

2. ರಬಕವಿ–ಬನಹಟ್ಟಿಯಲ್ಲಿ ಒಳಚರಂಡಿ ಕಾಮಗಾರಿಯನ್ನು ಕೈಗೊಳ್ಳಲು ದಿನಾಂಕ : 17–10–2011 ರಂದು ರೂ. 26.16 ಕೋಟಿ ವೆಚ್ಚದಲ್ಲಿ ಎ.ಡಿ.ಬಿ. ನೆರವಿನ ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮದಡಿಯಲ್ಲಿ ಕೈಗೆತ್ತಿಕೊಂಡು ಕಾಮಗಾರಿಗಳ ಗುತ್ತಿಗೆಯನ್ನು ನೀಡಲಾಗಿದ್ದು, ಯೋಜನಾ ಅವಧಿ 18 ತಿಂಗಳು ನಿಗದಿಪಡಿಸಲಾಗಿರುತ್ತದೆ.

3. ಮಹಾಲಿಂಗಪುರ ಪಟ್ಟಣಕ್ಕೆ ಘಟಪ್ರಭಾ ನದಿಯಿಂದ ನೀರು ಸರಬರಾಜು ಯೋಜನೆಯನ್ನು ಶೀಘ್ರದಲ್ಲೇ ಕಾರ್ಯ ಚಾಲನೆ ಮಾಡಲಾಗುವುದು ಹಾಗೂ ನೀರಿನ ಪ್ರಮಾಣವನ್ನು 135 ಎಲ್.ಪಿ.ಸಿ.ಡಿ ಗೆ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಆದ್ದರಿಂದ ಮಹಾಲಿಂಗಪುರ ಪಟ್ಟಣಕ್ಕೆ ಒಳಚರಂಡಿ ಯೋಜನೆ ತಯಾರಿಸಲು ಮಂಡಳಿಯು ಸರ್ವೆ ಕಾರ್ಯವನ್ನು ಪೂರೈಸಿರುತ್ತದೆ, ಮತ್ತು ಯೋಜನಾ ವಿನ್ಯಾಸ ಹಾಗೂ ಅಂದಾಜು ಪಟ್ಟಿಯನ್ನು ಮಂಡಳಿಯು ತಯಾರಿಸಿ ಸ್ಥಳೀಯ ಸಂಸ್ಥೆ ಠರಾವು ಪಡೆದು ಸರ್ಕಾರದ ಅನುಮೋದನೆಗೆ ಸಲ್ಲಿಸಿದ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಇ) ಏಷಿಯನ್ ಅಭಿವೃದ್ಧಿ ಬ್ಯಾಂಕ್ ನೆರವಿನ ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮದಡಿಯಲ್ಲಿ ಅಧಿಕಾರಿಯುಕ್ತ ಸಮಿತಿಯ ನಿರ್ದೇಶನಕ್ಕೆ ಅನುಗುಣವಾಗಿ ಪ್ರಾಮುಖ್ಯತೆ ಅನುಸಾರ ಮರುಹಂಚಿಕೆ ಮಾಡಲು ಅವಕಾಶವಿರುತ್ತದೆ. ಈ ತೀರ್ಮಾನ ಕೈಗೊಳ್ಳಲು ನಗರ ಸ್ಥಳೀಯ ಸಂಸ್ಥೆಗಳು ಅಗತ್ಯತೆ ಮೇರೆಗೆ ಠರಾವು ಮಾಡಬೇಕಾಗಿರುತ್ತದೆ.

ಉಳಿದ ಮೂಲ ಸೌಕರ್ಯ ಅಭಿವೃದ್ಧಿ ಕಾರ್ಯಕ್ರಮಗಳನ್ನು

ಸಿಎಂಎಸ್‌ಎಂಟಿಡಿಪಿ ಅನುದಾನ ಹಾಗೂ ಸ್ಥಳೀಯ ಸಂಸ್ಥೆಗಳ ಸಂಪನ್ಮೂಲಗಳಿಂದ ಕೈಗೊಳ್ಳಲಾಗುತ್ತಿದೆ.

ಒಳಚರಂಡಿ ಯೋಜನೆಯನ್ನು ಅನುಷ್ಠಾನಗೊಳಿಸುವುದು

342 (544) ಶ್ರೀ ಸುರೇಶ್ ಬಾಬು ಸಿ.ಬಿ. (ಚಿಕ್ಕನಾಯಕನಹಳ್ಳಿ) :– ಮಾನ್ಯ ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ಪುರಸಭೆ ವ್ಯಾಪ್ತಿಯನ್ನು ಒಳಚರಂಡಿ ಯೋಜನೆಯಡಿ ಅನುಷ್ಠಾನಗೊಳಿಸಲು ಪ್ರಸ್ತಾಪಿಸಲಾಗಿದೆಯೇ ;

ಆ) ಚಿಕ್ಕನಾಯಕನಹಳ್ಳಿ ಪಟ್ಟಣವನ್ನು ಒಳಚರಂಡಿ (ಯುಜಿಡಿ) ಯೋಜನೆಯಡಿ ಸೇರಿಸಿದ್ದಲ್ಲಿ, ಯೋಜನಾ ಅನುಷ್ಠಾನಗೊಳಿಸಲು ಸರ್ಕಾರ ಏನು ಕ್ರಮ ಕೈಗೊಳ್ಳಲಾಗಿದೆ ?

ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು):–

ಅ) ಚಿಕ್ಕನಾಯಕನಹಳ್ಳಿ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಲು ಮಂಡಳಿಯು ಸರ್ವೆ ಕಾರ್ಯ ಕೈಗೊಂಡು ವಿವರವಾದ ಅಂದಾಜನ್ನು ರೂ. 30.00 ಕೋಟಿಗಳಲ್ಲಿ ತಯಾರಿಸಿದೆ. ಸದರಿ ಪ್ರಸ್ತಾವನೆಯನ್ನು ಸರ್ಕಾರದ ಅನುಮೋದನೆಗೆ ಮಂಡಳಿಯು ಸಲ್ಲಿಸಬೇಕಾಗಿದೆ.

ಆ) ಸದರಿ ಪ್ರಸ್ತಾವನೆಯನ್ನು ಮಂಡಳಿಯು ಸರ್ಕಾರಕ್ಕೆ ಸಲ್ಲಿಸಿದ ನಂತರ ಯೋಜನೆಯನ್ನು ಮಂಡಳಿಯ ಕ್ರಿಯಾ ಯೋಜನೆಯಲ್ಲಿ ಸೇರಿಸಿ ಹಣಕಾಸಿನ ಲಭ್ಯತೆಯ ಮೇಲೆ ಯೋಜನೆಯನ್ನು ಕೈಗೆತ್ತಿಕೊಳ್ಳಲು ಸೂಕ್ತ ಕ್ರಮ ವಹಿಸಲಾಗುವುದು.

ತೋಟಗಾರಿಕೆ ಇಲಾಖೆಯ ಯೋಜನೆಗಳು

343 (545) ಶ್ರೀ ಸುರೇಶ್ ಬಾಬು ಸಿ.ಬಿ. (ಚಿಕ್ಕನಾಯಕನಹಳ್ಳಿ) :– ಮಾನ್ಯ ತೋಟಗಾರಿಕೆ ಮತ್ತು ಸಕ್ಕರೆ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ರಾಜ್ಯದಲ್ಲಿ ತೋಟಗಾರಿಕೆ ಇಲಾಖೆಯಿಂದ 2008 ರಿಂದ ಇಲ್ಲಿಯವರೆಗೆ ಯಾವ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ ;